ಬರುತ್ತಿದೆ. ಆದುದರಿಂದ ದಯವಿಟ್ಟು, ಸರ್ಕಾರ ಇದನ್ನು ಕೈಬಿಡಬಾರದು. ಜವಳಿ ನಗರವನ್ನು ಮಾಡದೇ ಇದ್ದರೆ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಮಾರಕವಾಗುತ್ತದೆ, ಆರ್ಥಿಕ ಅಭಿವೃದ್ಧಿಗೂ ಸಹ ಮಾರಕವಾಗುತ್ತದೆ. ಆದುದರಿಂದ ದಯವಿಟ್ಟು ಸರ್ಕಾರ ಜವಳಿ ನಗರವನ್ನು ಮಾಡುವುದನ್ನು ಕೈಬಿಡುವುದಿಲ್ಲ ಮತ್ತು ಆದಷ್ಟು ಬೇಗ ಸ್ಥಾಪನೆ ಮಾಡುತ್ತೇವೆಂಬ ಒಂದು ಸ್ಪಷ್ಟ ಭರವಸೆಯನ್ನು ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್: ಸನ್ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿಯಲ್ಲಿ ಜವಳಿ ನಗರವನ್ನು ಮಾಡಬೇಕೆಂಬ ವಿಚಾರ ಸರ್ಕಾರದ ಮುಂದೆ ಇದ್ದು ಇದನ್ನು ಮಾಡುವುದಕ್ಕೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

(ಉ) ಮಹದೇವ ಜವಳಿ ಮಿಲ್ ಮುಚ್ಚದೇ ಇರಲು ಕ್ರಮ.

ಶ್ರೀ ಅಶೋಕ್ ಕಾಟ್ವೆ (ಹುಬ್ಬಳ್ಳಿ): ಮಾನ್ಯ ಅಧ್ಯಕ್ಷರೆ, ಮಹದೇವ ಜವಳಿ ಮಿಲ್, ಉತ್ತರ ಕರ್ನಾಟಕದಲ್ಲಿ ಸುಮಾರು 100 ವರ್ಷಗಳ ಹಿಂದೆ ಸ್ಥಾಪನೆಯಾಗಿರತಕ್ಕಂತಹ ಒಂದು ದೊಡ್ಡ ಮಿಲ್ ಆಗಿದೆ. ಧಾರವಾಡ ಜಿಲ್ಲೆ, ಬೆಳಗಾಂ ಜಿಲ್ಲೆ, ರಾಯಚೂರು ಜಿಲ್ಲೆ, ಈ ಭಾಗದಲ್ಲಿ ಬೆಳೆಯತಕ್ಕಂತಹ ಹತ್ತಿಯನ್ನು ಉಪಯೋಗ ಮಾಡುವುದಕ್ಕೆ ಈ ಮಿಲ್‌ನ್ನು ತೆರೆಯಲಾಗಿತ್ತು. ಈಗ ಆ ಮಿಲ್ಲನ್ನು ಮುಚ್ಚುವುದರಿಂದ ನೂರಾರು ಕಾರ್ಮಿಕರು ಬೀದಿ ಪಾಲಾಗುತ್ತಿದ್ದಾರೆ. ಆದುದರಿಂದ ಸರ್ಕಾರ ಆ ಮಿಲ್‌ನ್ನು ಮುಚ್ಚಬೇಕೆಂದು ಏನು ಕ್ರಮವನ್ನು ತೆಗೆದುಕೊಂಡಿರುತ್ತೀರಿ ಆ ನಿರ್ಧಾರವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಆ ಮಿಲ್‌ಗೆ ಹುಬ್ಬಳ್ಳಿ ನಗರದ ಮಧ್ಯ ಭಾಗದಲ್ಲಿ 45 ಎಕರೆ ಜಮೀನು ಇರುವುದರಿಂದ, ಆ 45 ಎಕರೆ ಜಮೀನಿನ ಮೌಲ್ಯ ನೂರಾರು ಕೋಟಿ ರೂಪಾಯಿಗಳಾಗುತ್ತದೆ. ಈಗ 45 ಎಕರೆ ಜಮೀನಿನಲ್ಲಿ ಅರ್ಧ ಭಾಗ ಜಮೀನನ್ನು ಮಾರಿ ಅದನ್ನು ಮತ್ತೆ ಪುನಶ್ಚೇತನಗೊಳಿಸಿದರೆ ಹೆಚ್ಚಿನ ಹೊಸ ಯಂತ್ರಗಳನ್ನು ಆ ಮಿಲ್‌ನಲ್ಲಿ ಹಾಕಿ ಬಳಸಿದ್ದೇ ಆದರೆ ಆ ಭಾಗಗಳಲ್ಲಿ ರೈತರು ಬೆಳೆಯುವಂತಹ ಹತ್ತಿಗೆ ಯೋಗ್ಯ ಬೆಲೆಯೂ ಸಹ ಸಿಗುವುದು; ಎರಡನೆಯದಾಗಿ ಅಲ್ಲಿ ಕೆಲಸಕ್ಕೆ ಇರುವಂತಹ ಕಾರ್ಮಿಕರನ್ನೂ ಸಹ ಉಳಿಸಬಹುದೆಂದು ಸರ್ಕಾರಕ್ಕೆ ಸಲಹೆಯನ್ನು ಕೊಡುತ್ತಿದ್ದೇನೆ. ಈ ಮಿಲ್‌ನ್ನು ಮುಚ್ಚದೇ ಯೋಗ್ಯ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಂತಹ ಮಿಲ್ ಅದು ಮೊದಲು ಸಹಕಾರಿ ಗಿರಣಿಯಾಗಿತ್ತು, ತದನಂತರ ಅದನ್ನು ಮುಚ್ಚುವಂತಹ ಪ್ರಸಂಗ ಬಂದಿದ್ದಾಗ ಸರ್ಕಾರ ಅದನ್ನು ತೆಗೆದುಕೊಂಡಿತ್ತು, ನಂತರ ಅದನ್ನು ಬೇರೆಯವರಿಗೆ ಕೊಟ್ಟಿತ್ತು. ಹೀಗಾಗಿ ಹಿಂದೆ ಇದ್ದಂತಹ ಸರ್ಕಾರ ಮತ್ತು ನಮ್ಮ ಸರ್ಕಾರ ಪ್ರಯತ್ನವನ್ನು ಮಾಡಿದ್ದರೂ ಕೂಡ ಅದು ಲಾಭದಾಯಕವಾಗುವಂತಹ ಸ್ಥಿತಿಗೆ

ಬರುವುದಿಲ್ಲ ಎನ್ನುವಂತಹ ದೃಷ್ಟಿಯಿಂದ ಅದನ್ನು ಮುಚ್ಚಬೇಕೆಂದು ತೀರ್ಮಾನವಾಗಿ ಈಗಾಗಲೇ ಬಿ.ಆರ್.ಎಫ್.ನ ಮುಂದೆ ಇದೆ. ಇಲ್ಲಿ ಏನು ನಿರ್ಣಯವಾಗುತ್ತದೆ ಅದರ ಪ್ರಕಾರವಾಗಿ ಕ್ರಮವನ್ನು ಕೈಗೊಳ್ಳುತ್ತೇವೆಂದು ಭರವಸೆಯನ್ನು ಕೊಡುತ್ತಿದ್ದೇನೆ.

(ಊ) ಮೈಸೂರಿನಲ್ಲಿ ಆಕ್ಸಿಡೆಂಟಿಲ್ ಆಸ್ಪತ್ರೆ ತೆರೆಯುವ ಬಗ್ಗೆ.

ಶ್ರೀ ಇ.ಮಾರುತಿ ರಾವ್ ಪವಾರ್ (ನರಸಿಂಹರಾಜ): ಮಾನ್ಯ ಅಧ್ಯಕ್ಷರೇ, ಮೈಸೂರು ಮಂಡ್ಯ, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಯೂ ಸಹ ಒಳಗೊಂಡಂತೆ ಒಂದು ಆಕ್ಸಿಡೆಂಟಲ್ ಆಸ್ಪತ್ರೆಯ ಅವಶ್ಯಕತೆ ಇದೆ. ಕಳೆದ ವಾರ ನಮ್ಮ ಮೈಸೂರು ನಗರಪಾಲಿಕೆ ಸದಸ್ಯರಾದಂತಹ ಶ್ರೀಮತಿ ಸರಸ್ವತಿಯವರು ಅಪಘಾತದಲ್ಲಿ ತಲೆಗೆ ಏಟು ಬಿದ್ದು ಅಲ್ಲಿ ಚಿಕಿತ್ಸೆಗೆ ಸರಿಯಾದಂತಹ ಆಸ್ಪತ್ರೆಯೂ ಇಲ್ಲದೇ ಇರುವುದರಿಂದ ಬೆಂಗಳೂರಿಗೆ ಕಳುಹಿಸಿಕೊಟ್ಟರು. ಅವರು ಇಲ್ಲಿ ಸಾವನ್ನು ಅಪ್ಪಬೇಕಾಯಿತು. ಈಗಾಗಲೇ ನಮ್ಮ ಮೈಸೂರು ನಗರದ ತಿಲಕ್ ನಗರದಲ್ಲಿ ಇ.ಡಿ.ಆಸ್ಪತ್ರೆ ಎಂದು ಇತ್ತು. ಇದು ಈಗಾಗಲೇ ಕೆ.ಆರ್.ರಸ್ತೆಗೆ ಅದನ್ನು ಬದಲಾಯಿಸಲಾಗಿದೆ. ಅಲ್ಲಿರತಕ್ಕಂತಹ ನಾಲ್ಕು ಎಕರೆ ಪ್ರದೇಶ ಏನಿದೆ ಆ ಪ್ರದೇಶದಲ್ಲಿ ಆಸ್ಪತ್ರೆಯನ್ನು ಕಟ್ಟಲು 120 ಲಕ್ಷ ರೂಪಾಯಿಗಳಿಗೆ ಎರಡು ಮೂರು ವರ್ಷಗಳ ಹಿಂದೆ ಲೋಕೋಪಯೋಗಿ ಇಲಾಖೆಯಿಂದ ಅಂದಾಜನ್ನು ಮಾಡಿ, 2-3 ವರ್ಷಗಳ ಹಿಂದೆ ಬಜೆಟ್‌ನಲ್ಲಿ 40 ಲಕ್ಷ ರೂಪಾಯಿಗಳನ್ನು ಎತ್ತಿಟ್ಟಿದ್ದಾರೆ. ಆದರೆ ಇಲ್ಲಿಯವರೆಗೆ ಇದರ ಕೆಲಸ ಪ್ರಾರಂಭವಾಗಿಲ್ಲ. ನಾನು ಈ ವಿಚಾರವನ್ನು ಏಕೆ ಪ್ರಮುಖವಾಗಿ ಹೇಳುತ್ತಿದ್ದೇನೆಂದರೆ ಮೈಸೂರಿನ ಸುತ್ತಮುತ್ತಲಿನಲ್ಲಿರುವ ಯಾವುದಾದರೂ ಜಿಲ್ಲೆಯವರಿಗೆ ಆಕ್ಸಿಡೆಂಟ್ ಆಗಿ ತಲೆಗೆ ಪೆಟ್ಟು ಬಿದ್ದರೆ ಅವರನ್ನು ಬೆಂಗಳೂರಿಗೆ ಕರೆದುಕೊಂಡು ಬಂದು ಅಡ್ಮಿಟ್ ಮಾಡಿ ಚಿಕಿತ್ಸೆಯನ್ನು ಪಡೆಯುವಂತಹ ಒಂದು ವ್ಯವಸ್ಥೆಯಾಗುತ್ತಿದೆ. ಇದು ಮೈಸೂರಿನಲ್ಲಿ ಒಂದು ಆಸ್ಪತ್ರೆಯಾದರೆ ಮೈಸೂರಿನ ಸುತ್ತಮುತ್ತ ಇರತಕ್ಕಂತಹ ಜಿಲ್ಲೆಗಳಲ್ಲಿ ಆಕ್ಸಿಡೆಂಟ್ ಆಗಿ ತಲೆಗೆ ಪೆಟ್ಟು ಬಿದ್ದರೆ ತುರ್ತಾಗಿ ಚಿಕಿತ್ಸೆಯನ್ನು ನೀಡಿ ಅವರ ಜೀವವನ್ನು ಉಳಿಸುವುದಕ್ಕೆ ಅನುಕೂಲವಾಗುತ್ತದೆ. ಬೆಂಗಳೂರಿಗೆ ಕರೆದುಕೊಂಡು ಬರುವಂತಹ ಸಂದರ್ಭದಲ್ಲಿ ಮಧ್ಯದಲ್ಲಿ ಪ್ರಾಣವನ್ನು ಕಳೆದುಕೊಂಡಿರುವಂತಹ ಉದಾಹರಣೆಗಳು ಸಾಕಷ್ಟು ಇದೆ. ಆದ್ದರಿಂದ ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುವುದೇನೆಂದರೆ ಈಗಾಗಲೇ ಹಣವನ್ನು ಇಟ್ಟಿರುವುದರಿಂದ ತಕ್ಷಣ ಆಸ್ಪತ್ರೆಯನ್ನು ಕಟ್ಟಿ ಅನುಕೂಲವನ್ನು ಮಾಡಿಕೊಡಬೇಕು.

ಎ) ಮೈಸೂರು ಕೆ.ಆರ್.ಆಸ್ಪತ್ರೆ ಕಟ್ಟಡ ನಿರ್ಮಾಣದ ಬಗ್ಗೆ.

ಶ್ರೀ ಹೆಚ್.ಎನ್.ಶಂಕರಲಿಂಗೇಗೌಡ (ಚಾಮರಾಜ): ಮಾನ್ಯ ಅಧ್ಯಕ್ಷರೇ, ಈ ಆಸ್ಪತ್ರೆ ಮೈಸೂರಿನಲ್ಲಿ ತುಂಬಾ ಅವಶ್ಯಕ ಇದೆ.

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು): ಮಾನ್ಯ ಸಭಾಧ್ಯಕ್ಷರೇ,